ಇ) ಕಾಮಗಾರಿಯನ್ನು ಯಾವಾಗ ಪ್ರಾರಂಭಿಸಲು ಉದ್ದೇಶಿಸಲಾಗಿದೆ? ಈ ಬಗ್ಗೆ ತೆಗೆದುಕೊಂಡಿರುವ ಕ್ರಮವೇನು?

ಶ್ರೀ ಎಂ.ಪಿ. ಕೇಶವಮೂರ್ತಿ (ಸಣ್ಣ ನೀರಾವರಿ ರಾಜ್ಯ ಸಚಿವರು) :

ಅ) ಧಾರವಾಡ ಜಿಲ್ಲೆಯ ಹಿರೇಕೆರೂರು ತಾಲ್ಲೂಕಿನ ಕುಮದ್ವತಿ ನದಿಗೆ ಕುಡುಪಲಿ ಗ್ರಾಮದ ಹತ್ತಿರ ಬ್ಯಾರೇಜ್ ನಿರ್ಮಾಣದ 73.28 ಲಕ್ಷ ರೂ.ಗಳ ಅಂದಾಜಿಗೆ ದಿನಾಂಕ : 31-3-94ರಂದು ಸರ್ಕಾರವು ಆಡಳಿತಾತ್ಮಕ ಅನುಮೋದನೆಯನ್ನು ನೀಡಿದೆ. ತಾಂತ್ರಿಕ ಮಂಜೂರಾತಿಗಾಗಿ ಅಂದಾಜು ಪತ್ರಿಕೆ ಪರಿಶೀಲನೆಯಲ್ಲಿದೆ.

ಆ) ಕಾಮಗಾರಿಯ ಅಂದಾಜು ಮೊತ್ತ 73.28ಲಕ್ಷ ರೂ.ಗಳು 1994-95ರಆಯವ್ಯಯದಲ್ಲಿ ಈ ಕಾಮಗಾರಿಗೆ 1.00 ಲಕ್ಷ ರೂ.ಗಳ ಅನುದಾನವಿರುತ್ತದೆ.

ಇ) ಅಂದಾಜಿಗೆ ತಾಂತ್ರಿಕ ಮಂಜೂರಾತಿ ದೊರೆತ ಮೇಲೆ ಕೆಲಸ ಪ್ರಾರಂಭಿಸಲಾಗುವುದು.

ಗದಗ್ ತಾಲ್ಲೂಕಿನ ಬಿಂಕದಕಟ್ಟಿ ಗ್ರಾಮದ ಬಳಿ ಇರುವ ಪ್ರಾಣಿಸಂಗ್ರಹಾಲಯಕ್ಕೆ ಹೋಗುವ ರಸ್ತೆ ದುರಸ್ತಿ

331- ಶ್ರೀ ಡಿ.ಆರ್. ಪಾಟೀಲ್ (ಗದಗ್) : ಮಾನ್ಯ ಲೋಕೋಪಯೋಗಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ?

ಅ) ಕಾರವಾರ - ಬಳ್ಳಾರಿ ಹೆದ್ದಾರಿಗೆ ಹೊಂದಿದಂತೆ ಎರಡು ಕಿಲೋಮೀಟರ್ ಅಂತರದ ಮೇಲೆ ಬಿಂಕದಕಟ್ಟಿ ಗ್ರಾಮದ ಬಳಿ ಇರುವ ಪ್ರಾಣಿ ಸಂಗ್ರಹಾಲಯಕ್ಕೆ ಹೋಗುವ ರಸ್ತೆಯನ್ನು ಲೋಕೋಪಯೋಗಿ ಇಲಾಖೆ ತೆಗೆದುಕೊಂಡು ಅದನ್ನು ಸುಧಾರಿಸಲು ಸರ್ಕಾರ ಕ್ರಮ ಕೈಗೊಳ್ಳುವುದೇ?

ಶ್ರೀ ಕೆ.ಹೆಚ್. ರಂಗನಾಥ್ (ಲೋಕೋಪಯೋಗಿ ಸಚಿವರು) :

ಅ) ಕಾರವಾರ ಬಳ್ಳಾರಿ ರಾಜ್ಯ ಹೆದ್ದಾರಿಯಿಂದ ಅಸುಂಡಿ ಗ್ರಾಮಕ್ಕೆ ಬಿಂಕದಕಟ್ಟಿ ಪ್ರಾಣಿ ಸಂಗ್ರಹಾಲಯದ ಮುಖಾಂತರ ಇರುವ 3 ಕಿ.ಮೀ. ರಸ್ತೆಯು ಗ್ರಾಮೀಣ ರಸ್ತೆಯಾಗಿದ್ದು ಜಿಲ್ಲಾ ಪರಿಷತ್ತಿನ ಅಧೀನದಲ್ಲಿದೆ. ಈ ರಸ್ತೆಯನ್ನು ಲೋಕೋಪಯೋಗಿ ಇಲಾಖೆಯಿಂದ ಅಭಿವೃದ್ಧಿಪಡಿಸುವ ವಿಚಾರ ಸರ್ಕಾರದ ಪರಿಶೀಲನೆಯಲ್ಲಿ ಇಲ್ಲ.

ಕೃಷ್ಣ ಮೇಲ್ದಂಡೆ ಅಣೆಕಟ್ಟಿನಲ್ಲಿ ಹೂಳು ತುಂಬುವುದನ್ನು ತಡೆಗಟ್ಟುವುದು.

166 - ಶ್ರೀ ಡಿ. ಆರ್. ಪಾಟೀಲ್ (ಗದಗ್) : ಮಾನ್ಯ ಉಪಮುಖ್ಯಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ?

ಅ) ಕೃಷ್ಣಾ ಮೇಲ್ದಂಡೆ ಅಣೆಕಟ್ಟಿನಲ್ಲಿ ಹೂಳು ತುಂಬುವುದನ್ನು ತಡೆಯಲು ಹಾಗೂ ಕೃಷ್ಣಾ ನದಿಯ ಹಿನ್ನಾಡುಪ್ರದೇಶದಲ್ಲಿ ಭೂಸವಕಳಿ ತಡೆಯಲು ಹಾಗೂ ಭೂಸಾರ ಸಂರಕ್ಷಿಸಲು ಸರ್ಕಾರ ಕ್ರಮ ಕೈಗೊಳ್ಳುವುದೇ?

ಆ) ಇದಕ್ಕಾಗಿ ಕೃಷ್ಣಾ ಮೇಲ್ದಂಡೆ ಯೋಜನೆಯ ಹಣದಲ್ಲಿ ಕೆಲಭಾಗವನ್ನು ಈ ಕಾರ್ಯಕ್ಕೆ ನಿಗಧಿಪಡಿಸುವ ಬಗ್ಗೆ ಸರ್ಕಾರ ಪರಿಶೀಲಿಸುವುದೇ?

ಶ್ರೀ ಎಸ್.ಎಂ. ಕೃಷ್ಣ (ಉಪಮುಖ್ಯಮಂತ್ರಿಗಳು):

ಅ) ಕೃಷ್ಣಾ ಮೇಲ್ದಂಡೆ ಯೋಜನೆಯ ಅಣೆಕಟ್ಟುಗಳಲ್ಲಿ ಹೂಳು ತುಂಬುವುದನ್ನು ತಡೆಯಲು ಕೃಷ್ಣಾ ನದಿಯ ಹಿನ್ನಾಡು ಪ್ರದೇಶದಲ್ಲಿ ಭೂಸವಕಳಿ ತಡೆಯಲು, ಭೂಸಾರ ಸಂರಕ್ಷಿಸಲು ಕ್ಯಾಚ್‌ಮೆಂಟ್ ಏರಿಯಾ ಜಲಾನಯನ ಪ್ರದೇಶದ ಟ್ರೀಟ್‌ಮೆಂಟ್ ಮಾಡಲಾಗುತ್ತಿದೆ. ಜಲಾನಯನ ಪ್ರದೇಶ ಟ್ರೀಟ್‌ಮೆಂಟಿನಲ್ಲಿ (1) ಭೂಸಾರ ಸಂರಕ್ಷಣೆ (2) ಅರಣ್ಯೀಕರಣ ಈ ಎರಡೂ ಕ್ರಮಗಳನ್ನು ಕೈಗೊಳ್ಳುವುದಿದ್ದು, ಅದಕ್ಕಾಗಿ ಮಾಸ್ಟರ್ ಆಕ್ಷನ್ ಪ್ಲಾನ್ ತಯಾರು ಮಾಡಲಾಗಿದೆ.